ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಸಕ್ಕರೆ ನಿರ್ದೇಶಕರು ಮೇ 1989ರಲ್ಲಿ ನೀಡಿದ ವರದಿಯ ಅನ್ವಯ ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಸಹಕಾರ ಸಂಘಗಳ ಕಾಯಿದೆ ನಿಯಮಗಳ ಹಾಗೂ ಬೈಲಾ ವಿಧಿಗಳ ಉಲ್ಲಂಘನೆ ಆಗಿರುವುದು 18ಪ್ರಕರಣಗಳು ಇದ್ದು ಸದರಿ ಸಕ್ಕರೆ ಕಾರ್ಖಾನೆಯಲ್ಲಿ ಹಣಕಾಸು ಹಾಗೂ ಆಡಳಿತಕ್ಕೆ ಸಂಬಂಧಪಟ್ಟಂತೆ ತೀವ್ರತರವಾದ ದುರಾಡಳಿತ ಮತ್ತು ಅವ್ಯವಹಾರ ನಡೆದಿದೆ ಎಂದು ವರದಿಸಿದ್ದು ಸದರಿ ವರದಿಯನ್ವಯ ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಆದೇಶ ಸಂಖ್ಯೆ ಸಿಎಂಡಬ್ಲ್ಯೂ 68 ಸಿಒಎಫ್ 89 ದಿನಾಂಕ 15-6-89ರಲ್ಲಿ ಸದರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಬೆಳಗಾಂ ಜಿಲ್ಲಾಧಿಕಾರಿಗಳನ್ನು ಸಹಕಾರ ಸಂಘಗಳ ಕಾಯಿದೆ 30ಎ ಮೇರೆಗೆ ವಿಶೇಷಾಧಿಕಾರಿಗಳನ್ನಾಗಿ ಒಂದು ವರ್ಷದ ಅವಧಿಗೆ ನೇಮಕಮಾಡಲಾಯಿತು.

ಸಕ್ಕರೆ ನಿರ್ದೇಶಕರ ನಂತರದ ವರದಿಗಳ ಮೇರೆಗೆ ಹಿಂದಿನ ಆಡಳಿತ ಮಂಡಳಿಯ ಲೋಪದೋಷಗಳನ್ನು ಸರಿಪಡಿಸಲು ವಿಶೇಷಾಧಿಕಾರಿಗಳು ಗಮನ ಹರಿಸಿ ಕಾರ್ಖಾನೆಯ ಅಭಿವೃದ್ಧಿಯ ಕಡೆ ವಿಶೇಷ ಗಮನ ನೀಡಿರುತ್ತಾರೆ. ಹಾಗೂ ಕಾರ್ಖಾನೆಯು ತನ್ನ ಕಬ್ಬು ಅರೆಯುವಿಕೆ ಸಾಮರ್ಥ್ಯದ ವಿಸ್ತರಣೆಯನ್ನು ಕೈಗೆತ್ತಿಕೊಂಡಿರುವುದನ್ನು ಪರಿಗಣಿಸಿ ವಿಶೇಷಾಧಿಕಾರಿಗಳ ಅವಧಿಯನ್ನು ದಿನಾಂಕ 15-6-90ರಿಂದ ಒಂದು ವರ್ಷ ಹಾಗೂ ದಿನಾಂಕ 15-6-91ರಿಂದ ಪುನಃ ಒಂದು ವರ್ಷದ ಅವಧಿಗೆ ವಿಸ್ತರಿಸಿದೆ. ವಿಶೇಷಾಧಿಕಾರಿಗಳ ಅವಧಿಯಲ್ಲಿ ಲಾಭ ಗಳಿಕೆಗಾಗಿ 1989-90ರ ಸಾಲಿಗೆ 91.16 ಲಕ್ಷ ರೂಪಾಯಿಗಳ ನಿವ್ವಳ ಲಾಭ ಹೊಂದಿ ಒಟ್ಟುಗೂಡಿದ ನಷ್ಟ 157.43 ಲಕ್ಷ ತೊಡೆದು ಹಾಕಿ ರೂ. 0.93 ಲಕ್ಷ ರೂಪಾಯಿಗಳ ಲಾಭ ಪಡೆದಿರುತ್ತದೆ.

ವಿಶೇಷಾಧಿಕಾರಿಗಳ ಅವಧಿಯು ಮುಗಿಯುವದರೊಳಗಾಗಿ ಕಾನೂನಿನ ಪ್ರಕಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಚಿಕ್ಕ ಪೇಟೆ ಕ್ಷೇತ್ರದಲ್ಲಿ ಹಳೆಯ ಪೈಪುಗಳನ್ನು ಬದಲಾವಣೆ ಮಾಡಿ ನೀರಿನ ವ್ಯವಸ್ಥೆ ಮಾಡುವುದು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ); ಚಿಕ್ಕಪೇಟೆ ಕ್ಷೇತ್ರದಲ್ಲಿ ಪೈಪುಗಳು ಹಳೆಯದಾಗಿದ್ದು ಹಲವಾರು ಕಡೆಗಳಲ್ಲಿ ತುಕ್ಕು ಹಿಡಿದಿದ್ದು ಇವುಗಳನ್ನು ಕೂಡಲೇ ಬದಲಿಸುವುದು ಅವಶ್ಯಕವಾಗಿರುತ್ತದ. ಇದರಿಂದ ಚಿಕ್ಕಪೇಟೆ ಕ್ಷೇತ್ರದಲ್ಲಿರುವ ವೆಂಕೂಸಾ ಗಲ್ಲಿ, ಬಿನ್ನಿಮಿಲ್ ರಸ್ತೆ (ಡಾ. ಟಿ.ಸಿ.ಎಂ. ರಾಯನ್ ಹಾಗೂ ಅರಳೇಪೇಟೆ ಮುಖ್ಯ ರಸ್ತೆಯ ಮಧ್ಯೆ) ಹಾಗೂ ಇತರ ರಸ್ತೆಗಳಲ್ಲಿ ಕಳೆದ ಆರು ತಿಂಗಳಿಂದ ನೀರಿನ ವ್ಯವಸ್ಥೆ ಹದಗೆಟ್ಟಿದೆ. ಆದ್ದರಿಂದ ಕೂಡಲೇ ಹಳೆಯ ಪೈಪುಗಳನ್ನು ಬದಲಾವಣೆ ಮಾಡುವುದರ ಜೊತೆಗೆ ಹೆಚ್ಚಿನ ಒತ್ತಡವನ್ನು ನೀಡಿ ಈ ಮೇಲ್ಕಂಡ ರಸ್ತೆಗಳ ಜೊತೆಗೆ ಚಿಕ್ಕಪೇಟೆ ಕ್ಷೇತ್ರದಲ್ಲಿರುವ ಇನ್ನೂ ಹಲವಾರು ಚಿಕ್ಕ ಗಲ್ಲಿಗಳಿಗೆ ಪ್ರತಿ ದಿನ ನೀರಿನ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಹಾಗೂ ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷರೆ,

ಶುದ್ಧೀಕರಣ ಯಂತ್ರದಿಂದ ನಗರದ ಹಳೆಯಪ್ರದೇಶಗಳಾದ ಚಿಕ್ಕಪೇಟೆ ಮುಂತಾದ ಕಡೆಗಳಲ್ಲಿ ಬೆಂಗಳೂರು ಜಲಮಂಡಳಿಯು ನೀರಿನ ಸರಬರಾಜಿನ ಪೈಪ್‌ಗಳನ್ನು

ಶುದ್ಧೀಕರಿಸಲು ಕ್ರಮ ತೆಗೆದುಕೊಂಡಿದೆ. ಮುಂದುವರೆದಂತೆ ಕೆಲವು ರಸ್ತೆಗಳಲ್ಲಿ ನೀರು ಸರಬರಾಜಿನ ಮಾರ್ಗಗಳನ್ನು ಹೊಸದಾಗಿ ಬದಲಾಯಿಸಲಾಗಿದೆ.

ನಗರದ ಹಳೆಯ ಪ್ರದೇಶಗಳಲ್ಲಿ ತುಕ್ಕು ಹಿಡಿದ ಹಳೆಯ ಪೈಪ್‌ಗಳನ್ನು ಬದಲಾಯಿಸಲು ಒಂದು ವಿಸ್ತಾರ ಯೋಜನೆಯನ್ನು ಬೆಂಗಳೂರು ಜಲಮಂಡಳಿಯು ರೂಪಿಸಿದ್ದು ಇದಕ್ಕೆ ಹುಡ್ಕೋದಿಂದ ಸಾಲದ ಹಣವನ್ನು ಕೇಳಲಾಗಿದೆ. ಹುಡ್ಕೋ ಸಾಲದ ಹಣ ರೂ. 5 ಕೋಟಿ ಶೀಘ್ರದಲ್ಲಿ ಬರುವ ನಿರೀಕ್ಷೆ ಇದ್ದು ಚಿಕ್ಕಪೇಟೆ, ಕಾಟನ್‌ಪೇಟೆ, ಕಬ್ಬನ್ ಪೇಟೆ ಮತ್ತಿತರ ಪ್ರದೇಶಗಳಲ್ಲಿ ತುಕ್ಕು ಹಿಡಿದ ಹಳೆಯ ಪೈಪುಗಳನ್ನು ಆದ್ಯತೆ ಮೇರೆಗೆ ಬದಲಾಯಿಸಲು ಕಾರ್ಯಕ್ರಮ ಕೈಗೊಳ್ಳಲಾಗುವುದು. ಈ ಮಧ್ಯೆ ಎಲ್ಲಿ ಪೈಪುಗಳು ಸಂಪೂರ್ಣವಾಗಿ ತುಕ್ಕು ಹಿಡಿದಿವೆಯೋ ಅಲ್ಲಿ ಅವುಗಳನ್ನು ಬೆಂಗಳೂರು ಜಲಮಂಡಳಿಯ ಹಣದಿಂದಲೇ ಬದಲಾಯಿಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಮತ್ತು ಕ್ರಮ ತೆಗೆದುಕೊಳ್ಳಲಾಗುವುದು. ಈ ತುಕ್ಕು ಹಿಡಿದ ಪೈಪುಗಳನ್ನು ಒಮ್ಮೆ ಬದಲಾಯಿಸಿದರೆ ಈ ಪ್ರದೇಶಗಳಿಗೆ ನೀರು ಸರಬರಾಜು ಹೆಚ್ಚಿನ ಪ್ರಮಾಣದಲ್ಲಿ ಉತ್ತಮಗೊಳ್ಳುತ್ತದೆ.

ಐ.ಪಿ.ಪಿ.ಯಿಂದ ಆರೋಗ್ಯ ಇಲಾಖೆಗೆ ಬಂದಿರುವ ನೌಕರರಿಗೆ ಸಂಬಳ ನೀಡದಿರುವುದರಿಂದ ಉಂಟಾದ ಪರಿಸ್ಥಿತಿ

ಶ್ರೀ ಬಾಬುರಾವ್ ಚವಾಣ್ (ಶಹಬಾದ್) : ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ (ಐಪಿಪಿಯಿಂದ ಆರೋಗ್ಯ ಇಲಾಖೆಗೆ ಬಂದಿರುವ) ನೌಕರರಿಗೆ ಸಂಬಳ ಸುಮಾರು ನಾಲ್ಕು ತಿಂಗಳಿಂದ ಕೊಟ್ಟಿರುವುದಿಲ್ಲ. ಸಂಬಳ ಇಲ್ಲದೆ ಕೆಲಸ ನಿರ್ವಹಿಸುತ್ತಿರುವ ನೌಕರರ ಸ್ಥಿತಿ ಬಹಳ ಗಂಭೀರವಾಗಿದೆ.

ಆದುದರಿಂದ ಸರಕಾರ ಇವರ ಸಂಬಳವನ್ನು ತಡೆಹಿಡಿದಿದ್ದಕ್ಕೆ ಕಾರಣಗಳೇನು? ಈಗ ಬೇಗನೆ ಸಂಬಳ ಕೊಡುತ್ತೀರಾ? ಅಥವಾ ಇಲ್ಲವೆ ಎನ್ನುವುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ತಿಳಿಸಬೇಕು ಮತ್ತು ಬೇಗನೆ ಸಂಬಳ ಕೊಡುವಹಾಗೆ ಮಾಡಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : (ಆರೋಗ್ಯ ಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೆ, ಐ.ಪಿ.ಪಿ. ನೌಕರರಿಗೆ ಕಳೆದ ನಾಲ್ಕು ತಿಂಗಳಿಂದ ಸಂಬಳ ಕೊಡದೇ ಇರುವುದು ನಿಜ. ಕೆಲವು ಆಡಳಿತಾತ್ಮಕ ದೋಷಗಳಿಂದ ನಿಧಾನವಾಗಿದೆ. ಈಗ ಸಂಬಳ ಕೊಡುವುದಕ್ಕೆ 1 ಲಕ್ಷ 20 ಸಾವಿರ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈ ಸಮಸ್ಯೆ ನಾವು ಬಗೆಹರಿಸಿದ್ದೇವೆ. ಒಂದೆರಡು ದಿವಸದಲ್ಲಿ ಅವರ ಕೈಗೆ ಹಣ ಪಾವತಿಯಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು : ಈಗ ಬೇಡಿಕೆಗಳು, ಶ್ರೀ ದೇಶಪಾಂಡೆ...

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಮುಂಚೆ ಈ ಸದನದಲ್ಲಿ ತಿರುವಳ್ಳವರ್ ಕವಿಗಳ ಪ್ರತಿಮೆ ಸ್ಥಾಪಿಸುವ ಬಗ್ಗೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದರು. ನಾವು ಇದಕ್ಕೆ ಒತ್ತಾಯ ಮಾಡಿದ್ದೇವೆ. ದಯಮಾಡಿ ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಕೊಡಿಸೋಣ. ಈಗ ಡಿಮ್ಯಾಂಡ್ ಮೂವ್ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ತಿರುವಳ್ಳುವರ್ ಪ್ರತಿಮೆ ಬಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ.